11

**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ 14 ಗ್ರಾನೀಸ(5)2016

2ನೇ ಮಹಡಿ, 'E' Block,
K.H.B Complex, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09, ದಿನಾಂಕ:18.03.2016

**ಸುತ್ತೋಲೆ**

ವಿಷಯ: ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಪ್ರಸ್ತಾವನೆಗಳ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂ:ಗ್ರಾಅಪ 12 ಗ್ರಾನೀಸ(4)11 (P) ದಿನಾಂಕ:12.03.2013
2. ಸರ್ಕಾರದ ಆದೇಶ ಸಂ:ಗ್ರಾಅಪ 29 ಗ್ರಾನೀಸ(2)15 ದಿನಾಂಕ:16.03.2015

---

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲಾ ಸಾರ್ವಜನಿಕ ಕುಡಿಯುವ ನೀರಿನ ಯೋಜನೆಗಳ ಸಮರ್ಪಕ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಸಲುವಾಗಿ ಉಲ್ಲೇಖಿತ ದಿನಾಂಕ:12.03.2013ರ ಆದೇಶದಲ್ಲಿ ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾರ್ಗಸೂಚಿಯನ್ನು ಜಾರಿ ಮಾಡಲಾಗಿದೆ. ಬಹುಗ್ರಾಮ (MVS) ಯೋಜನೆಗಳ O&M ವ್ಯವಸ್ಥೆಯನ್ನು ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಮುಖೇನ ಟೆಂಡರ್ ಕರೆದು ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಜಿಲ್ಲಾ ಪಂಚಾಯತ್‌ಗಳಿಗೆ ಅಧಿಕಾರ ನೀಡಲಾಗಿದೆ. ಅದರನ್ವಯ, ಈ ಕೆಳಕಂಡ ನೀತಿಗನುಗುಣವಾಗಿ ಅಗತ್ಯ ಆಡಳಿತಾತ್ಮಕ ಪರಿಕ್ರಮ ಕೈಗೊಳ್ಳತಕ್ಕದ್ದು.

- ಸಂಬಂಧಪಟ್ಟ ಗ್ರಾಮ ಪಂಚಾಯತಿ / ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗವು ಬಹುಗ್ರಾಮ ಯೋಜನೆಯಿಂದ ನೀರು ಸ್ವೀಕರಿಸುವ ಮಾರ್ಗಬಿಂದುವಿನ ಸ್ಥಳದಲ್ಲಿ Bulk water Meter ಅಳವಡಿಸುವುದು.
- ಗ್ರಾಮ ಪಂಚಾಯತಿಗಳು ವಿದ್ಯುತ್ ವೆಚ್ಚ ಸೇರಿದಂತೆ O&M ಬಾಬ್ತಿನ ವೆಚ್ಚದ ಕನಿಷ್ಠ 25% ರಷ್ಟನ್ನು ಮೊದಲ ವರ್ಷದಲ್ಲಿ ಕಡ್ಡಾಯವಾಗಿ ಭರಿಸುವುದು. ಮುಂದಿನ 8 ವರ್ಷದೊಳಗೆ ಶೇ.100ರಷ್ಟು ವೆಚ್ಚವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿ ಭರಿಸತಕ್ಕದ್ದು.
- ಜಿಲ್ಲಾ ಪಂಚಾಯತ್‌ಗಳು ಗ್ರಾಮದ O&M ವೆಚ್ಚ, ಕರ ವಸೂಲಿ ಹಾಗೂ O&M ಬಾಬ್ತಿನ ಗುತ್ತಿಗೆ ವ್ಯವಸ್ಥೆಯಡಿ ಪಾವತಿಸಬೇಕಾದ ಅನುದಾನದ ಮೊತ್ತ ಆಧರಿಸಿ, ಅಗತ್ಯವಿರುವ ಅನುದಾನವನ್ನು ಆಯಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ/ ಗ್ರಾಮ ಪಂಚಾಯತಿ/ ಏಜೆನ್ಸಿಗಳಿಗೆ Bulk water Meter System ಆಧಾರದ ಮೇಲೆ ಕರಾರಿನನ್ವಯ ಬಿಡುಗಡೆ ಮಾಡತಕ್ಕದ್ದು.
- ಅತ್ಯುನ್ನತವಾದ ಜೀವಜಲ ಕಲುಷಿತವಾಗದಂತೆ ಮತ್ತು ಪೋಲಾಗದಂತೆ ತಡೆಗಟ್ಟಲು ಆದ್ಯತೆ ನೀಡಬೇಕು. ಜೊತೆಗೆ, ಕುಡಿಯುವ ನೀರಿನ ವಲಯದಡಿ ತೊಡಗಿಸಿಕೊಂಡಿರುವ ಅಧಿಕಾರಿ/ ನೌಕರರಿಗೆ ಕಾಲಕಾಲಿಕ ತರಬೇತಿ/ ಅರಿವು ಮೂಡಿಸುವಂತಹ ಕಾರ್ಯಾಗಾರಗಳನ್ನು ನಡೆಸಬೇಕು ಮತ್ತು ಗ್ರಾಮ ಸಮುದಾಯಕ್ಕೆ ಸ್ಥಾಪಿತ ಕುಡಿಯುವ ನೀರು ಮತ್ತು ನೈರ್ಮಲ್ಯದಂತಹ ಸಾರ್ವಜನಿಕ ಸಂಪನ್ಮೂಲಗಳ ಸಂರಕ್ಷಣೆ ವಿಚಾರದಲ್ಲಿ ಜಾಗೃತಿ ಮೂಡಿಸಬೇಕು.

ದಿನಾಂಕ:12.03.2013ರ ಮಾರ್ಗಸೂಚಿಗಳನ್ವಯ ಬಹುಗ್ರಾಮ ಯೋಜನೆಗಳ O&M ಪ್ರಸ್ತಾವನೆಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಅಧ್ಯಕ್ಷತೆಯಲ್ಲಿ ಉಲ್ಲೇಖ(2)ರ ಆದೇಶದಂತೆ ರಚಿಸಲಾಗಿರುವ ಸಮಿತಿಯಲ್ಲಿ ಮಂಡಿಸಿ ತಮ್ಮ ಜಿಲ್ಲೆಗೆ NRDWP-O&M ಬಾಬ್ತಿನಡಿ ಬಿಡುಗಡೆಯಾಗುವ ಅನುದಾನದ ಮಿತಿಯೊಳಗೆ O&M ವೆಚ್ಚವನ್ನು ಪಾವತಿಸಲು KTTP 2000 ರನ್ವಯ ನಿಯಮಾನುಸಾರ ಕ್ರಮವಹಿಸುವುದು. ಇನ್ನು ಮುಂದೆ O&M ಕಾಮಗಾರಿಗೆ ಅನುಮೋದನೆ ನೀಡಿದ ನಂತರ, ಸದರಿ ಪ್ರಸ್ತಾವನೆಗಳಿಗೆ ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರ ಮುಖೇನ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ (SLSSC)ಯಲ್ಲಿ ಘಟನೋತ್ತರ ಮಂಜೂರಾತಿ ಪಡೆಯಲು ಕ್ರಮವಹಿಸತಕ್ಕದ್ದು.

(ಬಿ.ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

1. ರಾಜ್ಯದ ಎಲ್ಲಾ (30) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-09.
3. ರಾಜ್ಯದ ಎಲ್ಲಾ (4) ಅಧೀಕ್ಷಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗಗಳ ವೃತ್ತಗಳು.
4. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗಗಳು.